ಕರತಾರನಿಗೆ ಪ್ರಾಥಮಿಕ ಚಿಕಿತ್ಸೆಯೊಂದಿಗೆ ಸಿಪಿಆರ್ ಕೊಡಲಾಯಿತು. ಅವನ ಸ್ಥಿತಿ ಸ್ವಲ್ಪ ಸುಧಾರಿಸಿತು. ಅವನು ತುಂಬಾ ಹೆದರಿದ್ದ, ನಾಚುತ್ತಲೂ ಇದ್ದ. ಅವನಿಗೆ ಲೇಶಮಾತ್ರವೂ ಈಜು ಬರುತ್ತಿರಲಿಲ್ಲವೆಂಬುದು ತಿಳಿಯಿತು. ಆಗ ಅವನು, 'ನಿಮ್ಮಿಬ್ಬರನ್ನು ನೋಡಿ, ಈಜುವುದು ಸುಲಭವೆಂದು ನನಗೆ ಅನ್ನಿಸಿತು, ಅದಕ್ಕೇ ನಾನೂ ಸಮುದ್ರಕ್ಕೆ ಹಾರಿದೆ' ಎಂದ.

ಅವನಿಗೆ ಈ ಸಾಹಸ ಮತ್ತು ತಮಾಷೆ ದುಬಾರಿಯಾಯಿತು. ಸದ್ಯ ಅವನು ಪಾರಾದನೆಂದು ನನಗೆ ಸಂತಸವಾಗಿತ್ತು. ನಾನು ಬೋಟ್ ಯುವಕರನ್ನು ಮನಸಾರೆ ಅಭಿನಂದಿಸಿದೆ. ಜೋಶ್ ಸಹ ಅವರಿಗೆ ಧನ್ಯವಾದಗಳನ್ನು ಹೇಳಿದ, ಅವರ ಬೆನ್ನು ತಟ್ಟಿ ಕೈಗಳನ್ನು ಕುಲುಕಿದ. ಕರತಾರ ಸಹ ಅವರಿಗೆ ಕೃತಜ್ಞತೆಯನ್ನು ಹೇಳಿದ, ಆಗ ಅವರು ನನ್ನನ್ನು ತೋರಿಸುತ್ತಾ, 'ನಮಗಲ್ಲ, ಇವರಿಗೆ ಧನ್ಯವಾದಗಳನ್ನು ಹೇಳಿ. ಇವರು ನೀವು ಮುಳುಗುವುದನ್ನು ನೋಡಿ ಕಿರುಚಿದರು' ಎಂದರು.

'ಥ್ಯಾಂಕ್ ಯೂ ಆಂಟಿ...' ಕರತಾರ ನನ್ನನ್ನು ಅಪ್ಪಿಕೊಂಡ.

ನಾನೂ ಅವನನ್ನು ಅಪ್ಪಿಕೊಂಡು ಹೇಳಿದೆ, 'ನಾನು ಸಮುದ್ರಕ್ಕೆ ಹಾರಿ ನಿನ್ನನ್ನು ಉಳಿಸಲು ಬಂದಿದ್ದರೆ, ನಾನು ನಿನ್ನ ಧನ್ಯವಾದಕ್ಕೆ ಯೋಗ್ಯಳಾಗುತ್ತಿದ್ದೆ' ನಾನು ಬಿಕ್ಕಳಿಸಿ ಅತ್ತೆ.

'ನೀವು ಹೇಗೆ ಸಮುದ್ರಕ್ಕೆ ಹಾರಲು ಸಾಧ್ಯವಿತ್ತು? ನಿಮ್ಮ ಹತ್ರ ನೀಲ್ ಇದ್ದ' ಎಂದ ಕರತಾರ.

'ನೀಲ್‌ನನ್ನು ಯಾರ ಕೈಗಾದರೂ ಕೊಡಬಹುದಿತ್ತು.'

ಜೋಶ್ ಹೇಳಿದ, 'ಮಮ್ಮಿ, ನೀವು ಸಮುದ್ರಕ್ಕೆ ಇಳಿಯದಿದ್ದದ್ದು ಒಳ್ಳೆಯದಾಯಿತು. ನೀವು ಬೋಟ್‌ನವರಿಂದ ಸಹಾಯವನ್ನು ಬೇಡಿದ್ದು ಸರಿ. ಅವರು ಪ್ರೊಫೆಶನಲ್.'

'ನಾನು ಪ್ರೊಫೆಶನಲ್ಸ್‌ಗೂ ಮೀರಿದ್ದೆ...'

ಜೋಶ್ ನಾಚುತ್ತಾ ಹೇಳಿದ, 'ನಾನು ಸುಮ್ನೆ ನಿಮ್ಮನ್ನು ಹೊಗಳ್ತಿದ್ದೆ... ಮಮ್ಮಿ, ನಿಮ್ಮ ಈಜಿನಲ್ಲಿ ಈ ಹಿಂದಿನ ಶಕ್ತಿಯಿಲ್ಲ, ಸ್ಫೂರ್ತಿಯಿಲ್ಲ... ನೀವು ಕರತಾರನನ್ನು ಪಾರು ಮಾಡಲು ಸಮುದ್ರಕ್ಕೆ ಬರದಿದ್ದದ್ದೇ ಒಳ್ಳೆಯದಾಯಿತು...'

ಕರತಾರನ ಎರಡೂ ಕೈಗಳನ್ನು ಹಿಡಿದು ಜೋಶ್ ಹೇಳಿದ, 'ಮಿತ್ರ, ನೀನು ಉಳಿದೆ... ನಿನ್ನನ್ನು ಎಲ್ಲಿ ಕಳೆದುಕೊಳ್ತೀನೋ ಎಂಬ ಭಯ ನನಗಾಗಿತ್ತು...' ಜೋಶ್‌ನ ಕಣ್ಣುಗಳು ತುಂಬಿ ಬಂದವು.

ಇದ್ದಕ್ಕಿದ್ದಂತೆ ನಾವು ಮೂವರೂ ಪರಸ್ಪರ ತಬ್ಬಿಕೊಂಡೆವು. ನಮ್ಮ ನಡುವೆ ಕ್ಷಣ ಕಾಲ ಎಲ್ಲವೂ ಸ್ತಬ್ಧವಾಯಿತು. ನಾನು ಮಾನಸಿಕ ಮತ್ತು ಶಾರೀರಿಕವಾಗಿ ದುರ್ಬಲಳಾಗಿದ್ದೇನೆಂದು ಯೋಚಿಸಿ ರೋದಿಸುತ್ತಿದ್ದೆ! ನಾನು ಕರತಾರನನ್ನು ಉಳಿಸಲು ಸಮುದ್ರದಲ್ಲಿ ಇಳಿಯುವ ಧೈರ್ಯ ಮಾಡಲಿಲ್ಲ. ನನ್ನ ಈಜಿನಲ್ಲಿ ಈ ಹಿಂದಿನ ತಾಕತ್ ಇಲ್ಲವೆಂದು ಜೋಶ್ ಹೇಳುತ್ತಿದ್ದಾನೆ. ನನ್ನನ್ನು ಒಂದು ಕಾಲದಲ್ಲಿ ಮೀನು ಮತ್ತು ಅಲೆಗಳ ಮಗಳು ಎಂದು ಕರೆಯಲಾಗುತ್ತಿತ್ತು. ನನಗೆ ನನ್ನ ಈಜಿನ ಬಗ್ಗೆ ತುಂಬು ಹೆಮ್ಮೆಯಿತ್ತು. ಈಗ ಈ ಸ್ವಿಮ್ಮಿಂಗ್‌ನಿಂದ ಏನು ಉಪಯೋಗ...! ನನ್ನ ಮನಸ್ಸಿನಲ್ಲಿ ಅದೆಷ್ಟೋ ಭಾವನೆಗಳು ಮೂಡುತ್ತಿದ್ದವು. ಏನೇನೋ ನೆನಪಾಗುತ್ತಿದ್ದವು... ಸಹೋದರ ನೀಲ್‌ನ ಆಕಸ್ಮಿಕ ಸಾವು... ಅವನನ್ನು ಉಳಿಸಲು ನಮ್ಮ ಅಸಾಮರ್ಥ್ಯ... ಅಪ್ಪನ ಸಾವು... ನಾನು ಅವರ ಕರೆಯನ್ನು ಅವಹೇಳನ ಮಾಡಿದ್ದು... ಅಬ್ರಾಹಮ್‌ನೊಂದಿಗೆ ಅನುಭವಿಸಿದ ಆತ್ಮಗ್ಲಾನಿ... ಲಾರ್ಸ್‌ನೊಂದಿಗಿನ ಯಾತನಾಮಯ ಜೀವನ... ನನ್ನ ಅಸಹಾಯಕತೆ... ನನ್ನ ವಿವಶತೆ...

ಕರತಾರ ಮತ್ತು ಜೋಶ್ ನನಗೆ ಸಮಾಧಾನ ಹೇಳುತ್ತಿದ್ದರು. ಜೋಶ್ ತಮಾಷೆ ಮಾಡುತ್ತಾ ಹೇಳಿದ, 'ಸರಿ, ಹೋಗೋಣ, ಕರತಾರ ಬದುಕಿದ್ದಕ್ಕೆ ಪಾರ್ಟಿ ಮಾಡೋಣ... ಒಂದು ಒಳ್ಳೆಯ ರೆಸ್ಟೋರೆಂಟಿಗೆ ಹೋಗಿ ಊಟ ಮಾಡೋಣ...'

'ನಾನು ದುಡ್ಡು ಕೊಡುತ್ತೇನೆ,' ನಾನು ಕೂಡಲೇ ಹೇಳಿದೆ.

'ಆಗಲಿ, ನೀವೇ ಪೇಮೆಂಟ್ ಮಾಡಿ.'

'ಒಂದು ಒಳ್ಳೆಯ ರೆಸ್ಟೋರೆಂಟಿಗೆ ಕರೆದುಕೊಂಡು ಹೋಗು.'

ಇಬ್ಬರೂ ತಮ್ಮ ಮೊಬೈಲ್ ತೆಗೆದು ಗೂಗಲ್‌ನಲ್ಲಿ ರೆಸ್ಟೋರೆಂಟ್‌ಗಾಗಿ ಹುಡುಕಾಡಿದರು. ಕಡೆಗೆ ಅವರು ಒಂದು ಮೆಡಿಟೇರಿಯನ್ ರೆಸ್ಟೋರೆಂಟನ್ನು ಆಯ್ಕೆ ಮಾಡಿದರು.

ಸಂಜೆಯ ಐದು ಗಂಟೆ. ಇಂಗ್ಲಿಷ್ ಬೇ ಬೀಚ್‌ನಿಂದ ಟ್ಯಾಕ್ಸಿ ಹಿಡಿದು ನಾವು ನೇರವಾಗಿ ರೆಸ್ಟೋರೆಂಟಿಗೆ ಹೋದೆವು. ಕರತಾರನ ಒದ್ದೆಯಾದ ಜಡೆಯ ಉದ್ದ ಮತ್ತು ದಟ್ಟ ಕೂದಲುಗಳು ಅವನ ಸೊಂಟದವರೆಗೆ ಜೋತಾಡುತ್ತಿದ್ದವು. ಅವನು ಸಂತಸದಲ್ಲಿರುವಂತೆ ತೋರುತ್ತಿತ್ತು. ಅವನಿಗೆ ಜೀವನದ ಬೆಲೆ ತಿಳಿದಿತ್ತು. ಅವನು ಯಾವುದೇ ಅಪಾಯವಿಲ್ಲದೆ ಪಾರಾಗಿದ್ದ ಎಂಬ ಸಂತಸ ನಮಗೂ ಇತ್ತು. ನನ್ನ ಅಕೌಂಟಿನಲ್ಲಿ ಹೆಚ್ಚು ಹಣವಿರಲಿಲ್ಲ, ಆದರೆ ಅಂದು ಸಂಜೆಯ ರೆಸ್ಟೋರೆಂಟ್ ಬಿಲ್ಲನ್ನು ನನ್ನ ಕ್ರೆಡಿಟ್ ಕಾರ್ಡ್‌ನಿಂದ ಕೊಟ್ಟೆ.

ಈ ಘಟನೆಯ ನಂತರ ಕರತಾರ ನಮಗೆ ಮತ್ತೂ ಹತ್ತಿರದವನಾದ. ನಾವು ಹೋದಲ್ಲೆಲ್ಲಾ ಅವನು ನಮ್ಮೊಂದಿಗಿರುತ್ತಿದ್ದ.

ಹಗಲಿಡೀ ಸುತ್ತಾಡಿ, ರಾತ್ರಿ ಮನೆಗೆ ಬಂದು ನಿದ್ರಿಸುತ್ತಿದ್ದೆವು. ನಾನು ಮತ್ತು ನೀಲ್ ಬೆಡ್‌ನಲ್ಲಿ ಮಲಗಿದರೆ, ಜೋಶ್ ಕೆಳಗೆ ನೆಲಕ್ಕೆ ಹಾಸಿದ ಬೆಡ್‌ನಲ್ಲಿ ನಿದ್ರಿಸುತ್ತಿದ್ದ. ಆ ಹತ್ತು ದಿನಗಳು ನನ್ನ ಜೀವನದ ಅತ್ಯಂತ ಸಂತಸದ ದಿನಗಳಾಗಿದ್ದವು. ಒಟ್ಟಿನಲ್ಲಿ ಕೆನಡಾ ಟೂರ್ ಸುಖಕರವಾಗಿತ್ತು.

ನನ್ನ ಜೋಶ್ ಈ ಜಗತ್ತಿನಲ್ಲಿ ಕಾಲೂರಲು ಒಂಟಿಯಾಗಿಯೇ ಹೋರಾಡುತ್ತಿದ್ದ. ಅವನ ಮನೋಬಲವನ್ನು ಹೆಚ್ಚಿಸಲು ಅವನಿಗೆ ಹೇಳಿದೆ, 'ಮೈ ಸನ್, ನಾನು ನಿನಗೆ ದೊಡ್ಡ ಆದರ್ಶ ವ್ಯಕ್ತಿಯಲ್ಲ ಎಂಬುದು ನಿಜ. ಆದರೆ ನನಗೆ ನಿನಗಿಂತ ಹೆಚ್ಚು ಅನುಭವವಿದೆ. ನಾನು ನಾಲ್ಕು ಮಹಾದ್ವೀಪಗಳಲ್ಲಿ ಜೀವನ ಮಾಡಿದ್ದೇನೆ. ಜಗತ್ತಿನ ಸಂಸ್ಕೃತಿಗಳಲ್ಲಿ ಭಿನ್ನತೆಯಿದೆ, ಅದಕ್ಕೂ ಮಿಗಿಲಾಗಿ ಸಮಾನತೆಯಿದೆ. ನಾವು ಪರಸ್ಪರ ಆದರ ಮತ್ತು ಆತ್ಮೀಯತೆಯಿಂದ ವರ್ತಿಸಿದರೆ, ಎಲ್ಲರೂ ನಮ್ಮವರಾಗುತ್ತಾರೆ.'

ಜೋಶ್ ಒಪ್ಪಿಗೆಯಿಂದ ತಲೆಯಾಡಿಸಿದ. ನನಗೆ ತನ್ನ ಭವಿಷ್ಯದ ಯೋಜನೆಗಳನ್ನು ಹೇಳಿದ, 'ಡಿಯರ್ ಮದರ್, ಮಾಸ್ಟರ್ ಮಾಡಿದ ನಂತರ, ನನಗೆ ಇಲ್ಲಿಯ ಮೂರು ವರ್ಷದ ವರ್ಕ್ ಪರ್ಮಿಟ್ ಸಿಗುತ್ತದೆ. ಒಂದು ವರ್ಷದ ನೌಕರಿ ಮಾಡಿದ ನಂತರ ನನಗೆ ಇಲ್ಲಿಯ ಪಿ.ಆರ್. (ಪರ್ಮನೆಂಟ್ ರೆಸಿಡೆನ್ಸ್) ಕಾರ್ಡ್ ಸಿಗುತ್ತದೆ; ಎರಡು ವರ್ಷಗಳ ನೌಕರಿಯ ನಂತರ ನಾನು ಇಲ್ಲಿಯ ನಾಗರಿಕತೆಯನ್ನು ಪಡೆಯಬಲ್ಲೆ. ಒಮ್ಮೆ ನನಗೆ ಕೆನಡಾದ ನಾಗರಿಕತೆ ಸಿಕ್ಕರೆ, ನಾನು ಯುಎಸ್‌ಎಗೆ ಬರುವುದು ಸುಲಭವಾಗುತ್ತದೆ.'

ನಾನು ಹೇಳಿದೆ, 'ಮಾರ್ಕೋಗೆ ಸಹ ಯುಎಸ್‌ಎನಲ್ಲಿ ಕಾಯಂ ಆಗಿ ನೆಲೆಸುವ ಇಚ್ಛೆಯಿದೆ. ನೀನೂ ಅಮೆರಿಕಕ್ಕೆ ಶಿಫ್ಟ್ ಆಗಿಬಿಡು. ನಾವೆಲ್ಲಾ ಒಂದೇ ದೇಶದಲ್ಲಿ, ಒಂದೇ ನಗರದಲ್ಲಿರೋಣ... ಒಂದೇ ನಗರದಲ್ಲಿ, ಒಬ್ಬರಿಗೊಬ್ಬರು ಸಮೀಪದಲ್ಲಿದ್ದರೆ ಎಷ್ಟು ಚೆನ್ನಾಗಿರುತ್ತೆ...'

'ಯಸ್ ಡಿಯರ್ ಮದರ್, ಹೀಗೇ ಆಗುವುದು...'

ಜೋಶುಆ ನನ್ನ ಜೊತೆಯಲ್ಲಿರಬೇಕೆಂಬುದು ನನ್ನ ಅನೇಕ ವರ್ಷಗಳ ಬಯಕೆಯಾಗಿತ್ತು. ತಡವಾಗಿಯಾದರೂ ಆ ಕನಸು ಈಡೇರುವಂತೆ ತೋರುತ್ತಿತ್ತು. ನಾನು ಪುಳಕಿತಳಾಗುತ್ತಿದ್ದೆ. ನಾನಾ ತರಹದ ಕನಸುಗಳನ್ನು ಹೆಣೆಯುತ್ತಿದ್ದೆ. ನಾನು ಜೋಶ್‌ಗೆ ಸಿಯಾಟಲ್‌ಗೆ ಬರಲು ಹೇಳಿದೆ.

***

ಜೋಶ್ ಪ್ರತಿ ಮೂರ್ನಾಲ್ಕು ತಿಂಗಳಿಗೆ ಒಮ್ಮೆ ಸಿಯಾಟಲ್‌ಗೆ ಬರಲಾರಂಭಿಸಿದ. ನನ್ನ ಇಬ್ಬರು ಮಕ್ಕಳು ನನ್ನೊಂದಿಗಿರುವುದನ್ನು ನೋಡಿ ನನಗೆ ಸ್ವರ್ಗ ಸಿಕ್ಕಿದಂತಾಗಿತ್ತು. ನೀಲ್‌ಗಿಂತ ಜೋಶ್ ಇಪ್ಪತ್ತು ವರ್ಷ ದೊಡ್ಡವನಿದ್ದ, ಆದರೆ ಅವನನ್ನು ತುಂಬಾ ಪ್ರೀತಿಸುತ್ತಿದ್ದ, 'ಲಿಟಲ್ ಬ್ರದರ್' ಎಂದು ಕರೆಯುತ್ತಿದ್ದ. ನೀಲ್ ಸಹ ಅವನ ಪ್ರೀತಿಯನ್ನು ತಕ್ಷಣ ಅರಿತಿದ್ದ. ನನ್ನ ಮಡಿಲಿನಿಂದ ಜಾರಿ ಅವನ ಮಡಿಲಿಗೆ ಹೋಗುತ್ತಿದ್ದ. ಇಬ್ಬರು ಸಹೋದರರ ನಡುವೆ ಉತ್ತಮ ಹೊಂದಾಣಿಕೆಯಿದ್ದುದ್ದನ್ನು ನೋಡಿ ನನಗೆ ಅಪಾರ ಸಂತಸವಾಯಿತು.

ಮಾರ್ಕೋ ಜೋಶ್‌ನ ಮಲತಂದೆಯಾಗಿದ್ದ. ಇಂಥ ಅಸಹಜ ಸಂಬಂಧಗಳ ಬಗ್ಗೆ ಅವನು ತುಂಬ ಪರಿಪಕ್ವನಾಗಿದ್ದ. ಅವನು ತನ್ನ ಮಲತಂದೆಯೊಂದಿಗೆ ತುಂಬಾ ಗೌರವದಿಂದ ಭೇಟಿಯಾಗುತ್ತಿದ್ದ. ಮಾರ್ಕೋನ ಮನಸ್ಸಿನಲ್ಲಿ ಅವನ ಬಗ್ಗೆ ಮಿಶ್ರಿತ ಭಾವನೆಗಳಿದ್ದವು. ಅವನನ್ನು ಭೇಟಿಯಾದಾಗಲೆಲ್ಲಾ, ಅವನನ್ನು ದುರುಗುಟ್ಟಿ ನೋಡುತ್ತಾ ನನಗೆ ಹೇಳುತ್ತಿದ್ದ, 'ನ್ಯಾನ್ಸಿ, ಈ ಮನುಷ್ಯ ನಿನಗೆ 'ಮಮ್ಮಿ' ಎಂದು ಕರೆದಾಗ ನನಗೆ ವಿಚಿತ್ರವೆಂದು ಅನ್ನಿಸುತ್ತದೆ...'

ಬಡಪಾಯಿ ಜೋಶ್ ಸ್ವಲ್ಪ ಅನ್ಯಮನಸ್ಕನಾದ. ಅವಿಭಕ್ತ ಕುಟುಂಬದಲ್ಲಿ ಕಷ್ಟಗಳು ಎದುರಾಗುತ್ತವೆ. ಲಾರ್ಸ್ ಮತ್ತು ಮಾರ್ಕೋನಲ್ಲಿ,